ದಿನಾಂಕಃ 21-08-2018 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಶ್ರೀ ಎನ್.ಎಂ ವಕೀಲರಿಂದ ,**

ನಿಡಿ-12 ರಲ್ಲಿ ಕಂದಿರಾಮ ರೆಡ್ಡಿಯವರಾಗಲಿ ಮತ್ತು ಅವರ ಸಹಚರರಾಗಲಿ ಇಲ್ಲ ಎಂದರೆ ಸರಿ. ಸದರಿ ಫೋಟೊ ನಮ್ಮ ಹೊಲದಲ್ಲಿ ಬೇರೆ ಯಾವುದೊ ಹೊಲದ ಫೋಟೊ ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 17-01-2012 ರಂದು ನಾನು ವಾದಿ ನೀಡಿರುವ ನೋಟಿಸ್‌ಗೆ ಉತ್ತರ ಕೊಟ್ಟಿರುತ್ತೇನೆ ಎಂದರೆ ಸರಿ. ದಿನಾಂಕ 18-01–2012 ರಂದು ವಾದಿ ಪರ ವಕೀಲರು ನ್ಯಾಯಾಲಯದಲ್ಲಿ ಅಗ್ರಿಮೆಂಟ್ ಹಾಜರು ಪಡಿಸಿರುತ್ತಾರೆ ಎಂದರೆ ಸಾಕ್ಷಿ ನಾವು ಕೇಳಿದಾಗ ಕೊಟ್ಟಿರುವುದಿಲ್ಲ ತದನಂತರ ಹಾಜರು ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ದಿ. 17-01-2012 ರಂದು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಅಗ್ರಿಮಂಟ್ ಹಾಜರು ಪಡಿಸುವಂತೆ ಕೇಳಿಕದ್ದು ಆ ಪ್ರಕಾರ ವಾದಿ ದಿ.18-01-2012 ರಂದು ನ್ಯಾಯಾಲಯಕ್ಕೆ ಅಗ್ರಿಮೆಂಟ್ ಹಾಜರು ಪಡಿಸಿದ್ದಾರೆ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ದಿನಾಂಕ ನೆನಪಿದ್ದರೂ ಕೂಡ ನ್ಯಾಯಾಲಯದಲ್ಲಿ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿ. 17-01-2012 ರಂದು ನೀಡಿದ ಉತ್ತರದಲ್ಲಿ ವಾದಿ ಅಗ್ರಿಮೆಂಟ್‌ಗೆ ಫೋರ್ಜರಿ ಮಾಡಿ ಅದನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿ. ನಾನು ಸದರಿ ಉತ್ತರದಲ್ಲಿ ಕೇವಲ ಊಹೆ ಮೇಲೆ ಆ ರೀತಿ ಹೇಳಿರುತ್ತೇನೆ ಎಂದರೆ ಸಾಕ್ಷಿ

ಇಲ್ಲ ಅವರು ಸೃಷ್ಟಿ ಮಾಡಿದ್ದರಿಂದಲೇ ನಾನು ಆ ರೀತಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನೋಟಿಸ್‌ನಲ್ಲಿ ವಾದಿ ಅಗ್ರಿಮೆಂಟ್‌ನ್ನು ಫೋರ್ಜರಿ ಮಾಡಿ ಸೃಷ್ಟಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸಾಕ್ಷಿ ನಾನು ಹೇಳುವುದು ನಿಜ ಎಂದು ನುಡಿಯುತ್ತಾರೆ.

ಸದರಿ ಅಗ್ರಿಮೆಂಟ್‌ನ್ನು ಶಂಕರ ಬಂಡೆ ಗ್ರಾಮದಲ್ಲಿ ಕೆರೆ ಕೊಡಪ್ಪ, ವೀರಾರೆಡ್ಡಿ, ಕೃಪಾ ರೆಡ್ಡಿ ಹಾಗೂ ಕಂದಿ ರಾಮರೆಡ್ಡಿ ಇವರು ಸೇರಿ ಸೃಷ್ಟಿ ಮಾಡಿರುತ್ತಾರೆ ಎಂದು ನಾನು ನೋಟಿಸ್‌ಗೆ ನೀಡಿದ ಉತ್ತರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೊದಲು ಬೇಕೆಂತೆ ಸರಿಯಾದ ಉತ್ತರ ಕೊಟ್ಟು ನಂತರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಅಸಲು ದಾವಾ ಸಂಖ್ಯೆ 239/13 ರ ಹಾಗೂ ಈ ದಾವೆಯ ತಕರಾರಿನಲ್ಲಿ ವಾದಿಯೂ ಸುಮಾರು 2 ವರ್ಷಗಳಿಂದ ನಮ್ಮ ಬಳಿ ಜಗಳ ಮಾಡುತ್ತಿದ್ದಾನೆ ಎಂಬುದಾಗಿ ಹೇಳುರುತ್ತೇನೆ ಎಂದರೆ ಸರಿ. 2 ವರ್ಷಗಳಿಂದ ಎಲ್ಲೆಲ್ಲಿ, ಯಾವಾಗ ವಾದಿ ನಿಮ್ಮ ಜೊತೆ ಜಗಳ ಮಾಡಿರುತ್ತಾನೆ ಹಾಗೂ ಪಿರ್ಯಾದಿ ಏನಾದರೂ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ಜಗಳ ಮಾಡಿದಾಗಲೆಲ್ಲಾ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 2 ವರ್ಷಗಳಿಂದ ಜಗಳ ಮಾಡಿರುವುದಕ್ಕೆ ನೀಡಿರುವ ಪಿರ್ಯಾದಿಯ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸದರಿ ದಾವಾ ಸಲ್ಲಿಸುವ ಮೊದಲು 2 ವರ್ಷಗಳಿಂದ ವಾದಿ ನನ್ನ ಬಳಿ ಗಲಾಟೆ ಮಾಡುತ್ತಿದ್ದಾನೆ ಎಂದು ಹೇಳಿದ್ದು ಯಾವುದರ ಸಂಬಂಧ ಎಂದರೆ ಸಾಕ್ಷಿ ಈ ಹೊಲಕ್ಕೆ ಸಂಬಂಧಪಟ್ಟಂತೆ ಎಂದು ನುಡಿಯುತ್ತಾರೆ. ಹೊಲಕ್ಕೆ ಸಂಬಂಧಪಟ್ಟಂತೆ ಎಂದರೆ ಏನು

ಎಂದರೆ ಸಾಕ್ಷಿ ಕೆರೆ ಕೊಡಪ್ಪ, ವೀರಾ ರೆಡ್ಡಿ, ವಾದಿ ಹಾಗೂ ಗೋಪಾಲ ರೆಡ್ಡಿ ಇವರುಗಳು ಪೊರ್ಜರಿ ಮಾಡಿ ನನ್ನ ಹೆಸರನ್ನು ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದರ ಸಂಬಂಧ ಗಲಾಟೆ ಎಂದು ನುಡಿಯುತ್ತಾರೆ.

ನಿಡಿ-3 ನ್ನು ಬಿಟ್ಟು ಬೇರೆ ಪಿರ್ಯಾದಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹೌದು ಎಂದರೆ ನುಡಿಯುತ್ತಾರೆ. ಸದರಿ ಪಿರ್ಯಾದನ್ನು ದಿನಾಂಕ 30-01-2013 ವಾದಿಯರು ನನಗೆ ತೊಂದರೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಪಿರ್ಯಾದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಪಿರ್ಯಾದಿಯಲ್ಲಿ ದಿನಾಂಕ 19-01-2013 ಹಾಗೂ ದಿನಾಂಕ 18-01-2013 ರಂದು, ದಿ. 09-01-2012 ರಂದು ನನಗೆ ವಾದಿ ತೊಂದರೆ ಕೊಟ್ಟಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಪಿರ್ಯಾದಿಯಲ್ಲಿ ಉದ್ದೇಶ ಪೂರ್ವಕವಾಗಿ ವಾದಿ ನನ್ನ ಮೇಲೆ ದ್ವೇಷ ಸಾದಿಸಲು ನೋಟಿಸ್ ಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸದರಿ ದ್ವೇಷ ಯಾವ ದ್ವೇಷ ಎಂಬುದರ ಬಗ್ಗೆ ನೊಟಿಸ್‌ನಲ್ಲಾಗಲಿ, ನನ್ನ ವಾದ ಪತ್ರದಲ್ಲಾಗಲಿ ನನ್ನ ತಕರಾರಿನಲ್ಲಿ ಹೇಳಿಲ್ಲ ಎಂದರೆ ಸರಿ. ಸಾಕ್ಷಿ ಮೊಸ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಮೊಸ ಮಾಡಿರುತ್ತಾರೆ ಎಂದು ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದಲ್ಲಿ ತಿಳಿಸಿರುವಂತೆ ಯಾವಾಗ ಪಂಚಾಯಿತಿ ಯಾಯಿತು ಎಂದರೆ ಸಾಕ್ಷಿ ಪಂಚಾಯಿತಿ ನಾನು ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಟಿ.ಪಂಪಾಪತಿ ಮತ್ತು ಸಿ.ಮಲ್ಲಿಕಾರ್ಜುನ ಎಂಬುದಾಗಿ ತಿಳಿಸಿರುತ್ತೇನೆ ಎಂದರೆ

ಸರಿ. ಅವರ ತಂದೆಯ ಹೆಸರು ನನಗೆ ಗೊತ್ತಿರುತ್ತದೆ. ಟಿ.ಪಂಪಾಪತಿ ತಂದೆಯ ಹೆಸರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಎಸ್.ಪಂಪಾಪತಿಯ ಇವರ ತಂದೆಯ ಹೆಸರು ತಿಪ್ಪೆರುದ್ರಪ್ಪ ಎಂಬುದಾಗಿದ್ದು ಇನಿಸಿಯಲ್ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಂಪಾಪತಿ ಇವರು ಶಂಕರಬಂಡೆ ಗ್ರಾಮದವರು ಅವರಿಗೆ ಈಗ 40 ರಿಂದ 45 ವರ್ಷ ವಯಸ್ಸಾಗಿರಬಹುದು.

ಸಿ.ಮಲ್ಲಿಕಾರ್ಜುನ ಅವರ ತಂದೆಯ ಹೆಸರು ಮತ್ತು ಅವರ ವಯಸ್ಸು ನನಗೆ ಜ್ಞಾಪಕವಿರುವುದಿಲ್ಲ, ಅವರು ಊರು ಶಂಕರ ಬಂಡೆ. ಸದರಿಯವರನ್ನು ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಮಾಡಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ಟಿ. ಪಂಪಾಪತಿ ಅವರ ಇನಿಸಿಯಲ್ ಎಸ್ ಎಂಬುದಾಗಿ ಟಿ ಎಂಬುದನ್ನು ತಿದ್ದು ಪಡಿ ಮಾಡಲು ಕ್ರಮ ತೆಗೆದುಕೊಂಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಟಿ.ಪಂಪಾಪತಿ ಹಾಗೂ ಸಿ.ಮಲ್ಲಿಕಾರ್ಜುನ ಎಂಬುವರು ನಮ್ಮ ಊರಿನಲ್ಲಿ ಯಾರು ಇಲ್ಲದಿದ್ದರೂ ಕೂಡ ನಾನು ಅವರನ್ನು ಸೃಷ್ಟಿ ಮಾಡಿ ಹೆಸರಿಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಟಿ.ಪಂಪಾಪತಿ ಹಾಗೂ ಸಿ.ಮಲ್ಲಿಕಾರ್ಜುನ ಎಂಬುವರ ಸಮಕ್ಷಮದಲ್ಲಿ ನಮ್ಮ ಊರಿನಲ್ಲಿ ಯಾವುದೇ ಪಂಚಾಯಿತಿ ನಡೆದಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ಹಾಗೂ ವಾದಿಯವರ ನಡುವೆ ಯೂವುದೇ ರೀತಿಯ ಜಗಳಗಳು ನಡೆದಿಲ್ಲ ಮತ್ತು ಆತ ಯಾವುದೇ ರೀತಿಯಿಂದಲೂ ತೊಂದರೆ ಕೊಟ್ಟಿಲ್ಲ ಆದರೂ ನಾನು ಸುಳ್ಳು ಪಿರ್ಯಾದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಾನು ವಾದಿಯಿಂದ ದಿ. 18-01–2012 ರಂದು 9 ಲಕ್ಷ ರೂ.ಗಳಿಗೆ ದಾವಾ ಆಸ್ತಿಯನ್ನು ಸೇಲ್ ಅಗ್ರಿಮೆಂಟ್ ಮೂಲಕ ಬರೆದುಕೊಟ್ಟು ಅದೇ ದಿನ 8,50,000/- ರೂ. ವಾದಿಯಿಂದ ಮುಂಗಡ ಹಣವನ್ನು ಪಡೆದುಕೊಂಡು ತದನಂತರ ಅಗ್ರಿಮೆಂಟ್‌ನ್ ಷರತ್ತಿನಂತೆ ನಾನು ರಿಜಿಸ್ಟರ್ ಡಾಕುಮೆಂಟ್ ಬರೆದು ಕೊಟ್ಟಿರುವುತ್ತೇನೆ ಎಂದರೆ ಸಾಕ್ಷಿ ನಾನು ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಹಾಗೂ ಯಾವುದೇ ಹಣವನ್ನು ತೆಗೆದುಕೊಂಡಿಲ್ಲ ಅವರು ನನಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ.

ನಾನು ಅಗ್ರಿಮೆಂಟ್ ಬರಸಿದುಕೊಟ್ಟು ಹಣ ತೆಗೆದುಕೊಂಡಿದ್ದರೂ ಕೂಡ ನಾನು ನ್ಯಾಯಾಲಯದ ಮುಂದೆ ಹಣ ತೆಗೆದುಕೊಂಡಿಲ್ಲ ಹಾಗೂ ಅಗ್ರಿಮೆಂಟ್ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಖುದ್ದಾಗಿ ಕಂದಿ ರಾಮರೆಡ್ಡಿ ಯವರನ್ನು ಬೇಟಿಯಾಗಿ ಸದರಿ ಸೃಷ್ಟಿ ಮಾಡಿದ ದಾಖಲೆ ಬಗ್ಗೆ ನಾನು ವಿಚಾರಿಸಿದಾಗ ವಾದಿಯೂ " I will create /forged your signature and yours father signatures and also I will create such 100 documents and filed 100 cases against you" ಎಂಬುದಾಗಿ ನನಗೆ ಗದರಿಸಿದರು ಎಂದು ನಾನು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ದಾವಾ ಪತ್ರದಲ್ಲಿ ಯಾವ ದಿನಾಂಕದಂದು, ಯಾವ ಸಮಯದಂದು ಹಾಗೂ ಯಾವ ವಾರದಂದು ನಾನು ವಾದಿಯನ್ನು ಬೇಟಿ ಮಾಡಿದ್ದೆ ಎಂಬುದನ್ನು ತಿಳಿಸಿಲ್ಲ ಎಂದರೆ ಸರಿ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಪಿರ್ಯಾದನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ

ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಪಿಂದರ್ಯಾದು ಕೊಟ್ಟ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ವಾದಿ ಆ ರೀತಿ ನನಗೆ ಹೆದರಿಸಿಲ್ಲ ಹಾಗೂ ಆ ರೀತಿ ಪಿರ್ಯಾದು ಕೊಟ್ಟ ಬಗ್ಗೆ ನಾನು ಕಾಪಿ ಹಾಜರು ಪಡಿಸಿರುತ್ತೇನೆ ಎಂದು ಹೇಳಿದ್ದು ಆ ರೀತಿ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಆದರೂ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ. 18-01-2013 ರಂದು ರಾತ್ರಿ 9 ಗಂಟೆಯ ಸಮಯದಲ್ಲಿ ನನ್ನನ್ನು ವಾದಿ ತಡೆಗಟ್ಟಿ ನನಗೆ ಕೇಸು ವಾಪಸ್ಸು ತೆಗೆದುಕೊಳ್ಳಲು ಹೇಳಿದರು ಇಲ್ಲ ವಾದರೆ ನನ್ನನ್ನು ಕೊಲೆ ಮಾಡುತ್ತೇನೆ ಎಂದು ಹೆದರಿಸಿದರು ಎಂದು ಬರೆಸಿರುತ್ತೇನೆ ಎಂದರೆ ಸರಿ. ಆ ರೀತಿ ವಾದಿಯರು ನನ್ನನ್ನು ಎಂದಿಗೂ ಹೆದರಿಸಿಲ್ಲ, ಬೆದರಿಸಿಲ್ಲ ನಾನೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ನಾನು ಪೊಲಿಸ್ ಠಾಣೆಗೆ ಪಿರ್ಯಾದು ಕೊಡಲು ಹೋಗಿದ್ದು ಆದರೆ ಅವರು ತೆಗೆದುಕೊಳ್ಳಲಿಲ್ಲ ಆದ್ದರಿಂದ ಮಾರನೆ ದಿನ ನಾನು ಪಿರ್ಯಾದು ಕೊಟ್ಟಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ಅಗ್ರಿಮೆಂಟ್‌ನಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಹಾಗೂ ವಾದಿ ಕೆಟ್ಟವನು ಎಂದು ತೋರಿಸಿಕೊಳ್ಳುವ ಉದ್ದೇಶದಿಂದ ನಾನು ಈ ಎಲ್ಲ ಅಂಶಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಅವರು ನನಗೆ ಮೊಸ ಮಾಡಿದ್ದರಿಂದ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

ನಮ್ಮ ಊರಿನಲ್ಲಿ 2,500/- ಜನ ಸಂಖ್ಯೆ ಇರುತ್ತದೆ. ನಾನು ನಮ್ಮ ಊರಿನಲ್ಲೇ ಹುಟ್ಟಿ ಅಲ್ಲೆ ಬೆಳೆದಿರುತ್ತೇನೆ. ಸದರಿ ಊರಿನಲ್ಲಿ ಯಾವ ಏರಿಯಾ, ಯಾವ ಗಲ್ಲಿ, ಯಾರ ಮನೆ ಎಂಬುದು ನನಗೆ ಗೊತ್ತಿರುತ್ತದೆ ಎಂದರೆ ಸರಿ. ಯಾವ ಸ್ಥಳ, ಯಾರ ಮನೆ , ಮುಂದೆ ವಾದಿ ನನಗೆ ಬೆದರಿಸಿದರು ಎಂಬುದನ್ನು ನಾನು ನಿಖರವಾಗಿ ಹೇಳಿಲ್ಲ ಎಂದರೆ ಸರಿ. ದಿ. 31-01-2013 ರಂದು ನಾನು ವಾದಿ, ವೀರಾರೆಡ್ಡಿ, ಗೊಪಾಲ ರೆಡ್ಡಿ, ಮತ್ತು ಬಿ.ಕೆ ಕೆರೆಕೊಡಪ್ಪ ಇವರ ವಿರುದ್ಧ ದೂರು ಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆ ರೀತಿ ಆ ದಿನಾಂಕದಂದು ನಾನು ಪಿರ್ಯಾದು ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಿರ್ಯಾದಿಯ ಕಾಪಿಯನ್ನು ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ಹಾಜರು ಪಡಿಸಿಲ್ಲದಿದ್ದರೂ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ.19-03-2013 ರಂದು ನಾನು ನ್ಯಾಯಾಲಯದಲ್ಲಿ ವಾದಿ ಮತ್ತು ಇತರರ ಮೇಲೆ ಖಾಸಗಿ ದೂರನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ದೂರು ಸಲ್ಲಿಸಿರುದ್ದು ನಿಜ ಆದರೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಅವರು ಮೊಸ ಮಾಡಿದ್ದರಿಂದಲೇ ನಾನು ದೂರು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ದಿ. 05-01-2017 ರಂದು ನಾನು ಈ ನ್ಯಾಯಾಲಯದಲ್ಲಿ ಸಾಕ್ಷಿ ನಡೆಯುವ ಸಮಯದಲ್ಲಿ ಕ್ರಿಮಿನಲ್ ಮೊಕದ್ದಮೆ ಯಾವ ಹಂತದಲ್ಲಿದೆ ಹಾಗೂ ಅದು ಯಾವ ರೀತಿ

ಮುಂದುವರೆದಿದೆ ಎಂಬುದನ್ನು ತೋರಿಸಲು ಆಜ್ಞಾಪುಟದ ನಕಲನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಸದರಿ ಮೊಕದ್ದಮೆಯಲ್ಲಿ ಏನು ನಡೆಯುತ್ತಿದೆ ಎಂಬುವುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ.

ನಾನು ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ತದನಂತರ ನಾನು 4 ವರ್ಷಗಳ ಕಾಲ ಸದರಿ ಕೇಸನಲ್ಲಿ ಯಾವುದೇ ಪ್ರಯತ್ನ ಮಾಡದೆ ಆ ಕೇಸು ಮುಂದುವರೆಯಲು ಯಾವುದೇ ರೀತಿಯ ಪ್ರಯತ್ನ ಮಾಡದೆ ಸುಮ್ಮನಿದ್ದೆ ಎಂದರೆ ಸರಿಯಲ್ಲ. ಸದರಿ ಕೇಸು ಈಗಾಗಲೆ ತನಿಖೆಗಾಗಿ ಸಂಬಂಧಪಟ್ಟ ಪೋಲಿಸರಿಗೆ ಕಳುಹಿಸಲಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾವು ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಹೇಳಿದ್ದು

ತದನಂತರ ವಾದಿ ನನ್ನ ತಂದೆಯವರ ಬಳಿ ಹೋಗಿ ಸದರಿ ವಿಷಯ ಸತ್ಯವೊ ಸುಳ್ಳು ಎಂಬುದಾಗಿ ವಿಚಾರಿಸಿದರು ಎಂದರೆ ಸಾಕ್ಷಿ ಎಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ನಂತರ ವಾದಿ ನನ್ನ ತಂದೆ ಸದರಿ ಸ್ವತ್ತನ್ನು ತೆಗೆದುಕೊಳ್ಳಿ ನನಗೆ ಖಾಸಗಿ ಸಾಲದ ಬಡ್ಡಿ ಜಾಸ್ತಿಯಾಗಿದೆ ಎಂಬುದಾಗಿ ಹೇಳಿದ್ದರು ಎಂದರೆ ಸಾಕ್ಷಿ ಅವರು ನನ್ನ ತಂದೆಯ ಬಳಿ ಬಂದಿರುವುದಿಲ್ಲ ನನ್ನ ತಂದೆ ಆ ರೀತಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಮನೆಯಲ್ಲಿ ನನ್ನ ಹೆಂಡತಿಯ ಬಳಿ ಬಂದು ಕೂಡ ವಾದಿ ಸದರಿ ಆಸ್ತಿಯನ್ನು ನಾನು ಮಾರಾಟಕ್ಕೆ ಇಟ್ಟಿದ್ದೇನೆ ಎಂದು ಕೇಳಿದ್ದರು ಎಂದರೆ ಸಾಕ್ಷಿ ಎಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ನಂತರ ನಾನು, ವೀರಾ ರೆಡ್ಡಿ ಮತ್ತು ಗೊಪಾಲ ರೆಡ್ಡಿ ಇವರುಗಳು ಸೇರಿ ವಾದಿಯನ್ನು ಬೇಟಿ ಮಾಡಿದ್ದೇವು ಎಂದರೆ ಸಾಕ್ಷಿ ಸುಳ್ಳು ನಾನು ಅವರನ್ನು ಬೇಟಿ ಮಾಡಲು ಹೋಗಿಲ್ಲ ಎಂದು ನುಡಿಯುತ್ತಾರೆ.

ನಂತರ ನಾನು ಸಾಲದ ಬಡ್ಡಿ ಹೆಚ್ಚಾಗಿದೆ ಆದ್ದರಿಂದ ಸದರಿ ಸ್ವತ್ತನ್ನು ನೀವು ತೆಗೆದುಕೊಳ್ಳಿ ಎಂದು ನಾನು ಕಂದಿ ರಾಮರೆಡ್ಡಿ ಇವರನ್ನು ಕೇಳಿಕೊಂಡೆ ಎಂದರೆ ಸಾಕ್ಷಿ ನಾನು ಅವರ ಬಳಿ ಹೋಗಿರುವುದಿಲ್ಲ ಹಾಗೂ ಆ ರೀತಿ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ನಾನು ವಾದಿಗೆ ದಾವಾ ಜಮೀನಿನ ಪಹಣಿ ಹಾಗೂ ಮ್ಯೂಟೇಷನ್ ಗಳನ್ನು ತೋರಿಸಿ ಸದರಿ ಜಮೀನು ನನ್ನ ಹೆಸರಿಗಿದೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿ ನಾನು ಹೋಗಿಲ್ಲ ಆ ರೀತಿ ತೋರಿಸಿಲ್ಲ ಎಂದು ನುಡಿಯುತ್ತಾರೆ.

ವಾದಿ ನನ್ನ ತಂದೆಯವರನ್ನು ಹಾಗೂ ನನ್ನ ಹೆಂಡತಿಯನ್ನು ಅದೇ ರೀತಿ ನನ್ನನ್ನು ಬೇಟಿಯಾಗಿರುತ್ತಾರೆ ಆದರೂ ನಾನು ಇಲ್ಲ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬೆಲೆ ಕಟ್ಟುವುದಕ್ಕಾಗಿ ತಾಲೂಕು ಕಛೇರಿಯ ಆವರಣದಲ್ಲಿ ನಾನು, ಗೋಪಾಲ ರೆಡ್ಡಿ ಹಾಗೂ ವೀರಾ ರೆಡ್ಡಿಯವರು ಮಾತನಾಡಿರುತ್ತೇನೆ ಎಂದರೆ ಸಾಕ್ಷಿ ನಾನು ಯಾವತ್ತು ಮಾತನಾಡಿಲ್ಲ ಎಂದು ನುಡಿಯುತ್ತಾರೆ. ನಾವು ಮಾತನಾಡಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೊನೆಯಲ್ಲಿ ನಮ್ಮ ಮನೆಯಲ್ಲಿ ಗೋಪಾಲ ರೆಡ್ಡಿ, ವೀರಾ ರೆಡ್ಡಿ, ವಾದಿ ಹಾಗೂ ನಮ್ಮ ಮನೆಯವರ ಸಮುಕ್ಷಮದಲ್ಲಿ ದಾವಾ ಸ್ವತ್ತಿನ ಬೆಲೆ ನಿಗದಿ ಪಡಿಸಿಕೊಳ್ಳಲು ಮಾತುಕತೆಯಾಯಿತು ಎಂದರೆ ಸಾಕ್ಷಿ ಅವರ್‍ಯಾರು ನಮ್ಮ ಮನೆಯ ಬಳಿ ಬಂದಿಲ್ಲ ಹಾಗೂ ಮಾತುಕತೆ ಯಾಗಿಲ್ಲ ಎಂದು ನುಡಿಯುತ್ತಾರೆ.

ಕೊನೆಯದಾಗಿ 1 ಎಕರೆಗೆ 2 ಲಕ್ಷ ರೂ. ರಂತೆ ಬೆಲೆ ನಿಗದಿ ಯಾಯಿತು ಎಂದರೆ ಸಾಕ್ಷಿ ಅವರ್‍ಯಾರು ನಮ ಮನೆಯ ಬಳಿ ಬಂದಿಲ್ಲ ಹಾಗೂ ಮಾತುಕತೆಯಾಗಿಲ್ಲ ಎಂದು

ನುಡಿಯುತ್ತಾರೆ. ಅದೇ ರೀತಿ ಪೂರ್ಣ ದಾವಾ ಆಸ್ತಿಗೆ 9 ಲಕ್ಷ ರೂ. ಬೆಲೆ ನಿಗದಿಯಾಗಿದ್ದು ಅದರಲ್ಲಿ 8,50,000/- ರೂ. ಮುಂಗಡ ಹಣವಾಗಿ ಕೊಡಬೇಕೆಂದು ಮತ್ತು ನೊಂದಣಿ ಮಾಡುವ ಸಮಯದಲ್ಲಿ ಉಳಿದ 50,000-/ ರೂ. ಹಣ ಕೊಟ್ಟು ಕ್ರಯ ಪತ್ರ ಬರೆಸಿಕೊಳ್ಳುವಂತೆ ಮಾತಾಗಿತ್ತು ಎಂದರೆ ಸಾಕ್ಷಿ ಅದೆಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ಮೊಸ ಮಾಡವುದಕ್ಕೆ ದಾಖಲೆ ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯತ್ತಾರೆ. ಎಲ್ಲಾ ಮಾತುಕತೆಯಾಗಿದ್ದರೂ ಕೂಡ ನಾನು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಮಾತುಕತೆಯಂತೆ ದಿ. 18-01-2010 ರಂದು ನಾನು, ವಾದಿ, ವೀರಾರೆಡ್ಡಿ ಹಾಗೂ ಗೋಪಾಲ ರೆಡ್ಡಿ ಇವರು ಉಪನೊಂದಣಾಧಿಕಾರಿಗಳ ಕಛೇರಿಗೆ ಸೇಲ್ ಅಗ್ರಿಮೆಂಟ್ ಬರೆಸಿಕೊಳ್ಳಲು ಬಂದೆವು ಎಂದರೆ ಸಾಕ್ಷಿ ಆ ರೀತಿ ನಾವ್ಯಾರು ಬಂದಿರುವುದಿಲ್ಲ ಹಾಗೂ ನೀವು ಹೇಳುವಂತೆ ಅಲ್ಲಿ ಯಾವುದೇ ಮಾತುಕತೆಯಾಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಅದೇ ದಿನ ನಾನು ವೀರಾರೆಡ್ಡಿ, ಗೋಪಾಲ ರೆಡ್ಡಿ ಹಾಗೂ ವಾದಿ ಇವರೆಲ್ಲರೂ ಸೇರಿ ಪತ್ರ ಬರಹಗಾರರಾದ ಬಿ.ಕೆ ಕೆರೆ ಕೊಡಪ್ಪ ಇವರನ್ನು ಬೇಟಿಯಾದೇವು ಎಂದರೆ ಸಾಕ್ಷಿ ಸರಿಯಲ್ಲ ನಾವು ಬೇಟಿಯಾಗಿಲ್ಲ ಎಂದು ನುಡಿಯುತ್ತಾರೆ.

ಆ ನಂತರ ನಾನು ಸದರಿ ಕೆರೆ ಕೊಡಪ್ಪ ಇವರಿಗೆ ನಾನು ಜಮೀನು ಮಾರಾಟ ಮಾಡುತ್ತಿರುವ ವಿಷಯ ಹಾಗೂ ಬೆಲೆ ನಿಗದಿಯಾದ ವಿಷಯ ಎಲ್ಲವನ್ನು ತಿಳಿಸಿದ್ದು ಅದೇ ರೀತಿ ವಾದಿ ಕೂಡ ಸದರಿ ಸ್ವತ್ತನ್ನು ಖರಿದಿಸುತ್ತಿರುವ ವಿಷಯ ತಿಳಿಸಿ ಆ ಪ್ರಕಾರ ಸದರಿ

ಕೆರೆ ಕೊಡಪ್ಪ ಇವರಿಗೆ ಸೇಲ್ ಅಗ್ರಿಮೆಂಟ್ ಬರೆಯವಂತೆ ಮಾಹಿತಿ ಕೊಟ್ಟಿದು ಆ ಸಂಬಂಧ ಅವರು ಆ ದಾಖಲೆಯನ್ನು ಬರೆದರು ಎಂದರೆ ಸಾಕ್ಷಿ ಸರಿಯಲ್ಲ, ಆ ರೀತಿ ಯಾವುದೇ ದಾಖಲೆಗೆ ನಾನು ಮಾಹಿತಿ ಕೊಟ್ಟಿಲ್ಲ ಮತ್ತು ಹೇಳಿ ಬರೆಸಿಲ್ಲ ಎಂದು ನುಡಿಯುತ್ತಾರೆ.

ನಾವು ಮಾಹಿತಿ ಕೊಟ್ಟ ನಂತರ ಅದನ್ನು ಒಂದು ಪೆಪರ್‌ನಲ್ಲಿ ಸದರಿ ಕೆರೆ ಕೊಡಪ್ಪ ಇವರು ಬರೆದು ನನಗೆ ಓದಿ ಹೇಳಿದರು ಎಂದರೆ ಸಾಕ್ಷಿ ಇಲ್ಲ ನಾನು ಅವರಿಗೆ ಯಾವುದೇ ಮಾಹಿತಿ ಕೊಟ್ಟಿಲ್ಲ ಅವರು ಆ ರೀತಿ ಬರೆದಿರುವುದಿಲ್ಲ ನನಗೆ ಮೊಸ ಮಾಡುವ ಉದ್ದೇಶದಿಂದ ಅವರು ಅದನ್ನು ಸೃಷ್ಟಿ ಮೂಡಿರುತ್ತಾರೆ ಎಂದು ನುಡಿಯೂತ್ತಾರೆ. ಸದರಿ ವಿಷಯ ಬರೆದಿದ್ದನ್ನು ಕಂಪ್ಯೂಟರ್‌ನಲ್ಲಿ ಗಣಕೀಕೃತ ಮಾಡಿದ ನಂತರ ಅದನ್ನು ನಮಗೆ ಓದಿ ಹೇಳಿದ್ದು ನಾನು ಕೂಡ ಅದನ್ನು ಒಪ್ಪಿಕೊಂಡೆ ಎಂದರೆ ಸರಿಯಲ್ಲ.

ನಾನು ಅದೇ ರೀತಿ ದಿನ ಅಂದರೆ ದಿ. 18-01-2010 ರಂದು ಬರೆದ ಕರಾರು ಪತ್ರದಲ್ಲಿ ಸದರಿ ಹಣ ನನ್ನ ಕುಟುಂಬದ ಖರ್ಚುಗಳ ನಿಮಿತ್ಯವಾಗಿ ಬೇಕಾಗಿದ್ದು ಸದರಿ ಸ್ವತ್ತನ್ನು 9 ಲಕ್ಷ ರೂ.ಗಳಿಗೆ ವಿಕ್ರಯಿಸಲು ಒಪ್ಪಿ ಆ ಪೈಕಿ ನಿಮ್ಮಿಂದ ಮುಂಗಡ ಹಣವಾಗಿ 8,50,000/-ರೂ.ಗಳನ್ನು ನಗದು ಪಡೆದುಕೊಂಡಿದ್ದೆವು ಸದರಿ ಆಸ್ತಿಗೆ ಸಂಬಂಧಿಸಿದ ಕಂದಾಯ ಹಾಗೂ ಪಹಣಿ ಪತ್ರಿಕೆಗಳನ್ನು ಇತ್ಯಾದಿ ಅವಶ್ಯಕ ದಾಖಲೆಗಳನ್ನು ಪಡೆದುಕೊಂಡು ದಿ. 27-01-2012 ರಂದು ಅಥವಾ ಅದರೊಳಗಾಗಿ ನಿಮಗೆ ಮುಟ್ಟಿಸಿದ ಕೊಡಲೇ ನಿಮ್ಮಿಂದ ಉಳಿದ ಬಾಕಿ ಹಣ 50,000-/ ರೂ.ಗಳನ್ನು ನನಗೆ ಕೊಟ್ಟ ಕೂಡಲೇ ಶೆಡ್ಯೂಲ್ ಆಸ್ತಿಯುನ್ನು ನಿಮ್ಮ ಹೆಸರಿಗಾಗಲಿ ಅಥವಾ ನೀವು ಕೋರಿದವರ

ಹೆಸರಿಗಾಗಲಿ ನೊಂದಣಿ ಕ್ರಯ ಪತ್ರ ಮಾಡಿಸಿಕೊಡಲು ಖುದ್ದಾಗಿ ಒಪ್ಪಿಕೊಂಡಿರುತ್ತೇನೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೊಗಿಲ್ಲ ಹಾಗೂ ಆ ರೀತಿ ಹೇಳಿ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಅದೆ

2ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ